ಕೇಸಿನಲ್ಲಿ ವಾದ ಮಂಡಿಸಲು ಅನುಮತಿ ಕೋರಿದ್ದಾರೆ, ಆದ್ದರಿಂದ ಪಾಟೀಸವಾಲು ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಸಾಬಪ್ಪ)**
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು.**

**ದಿಃ-30-05-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಪಾಟಿಸವಾಲು : ಎದುರುದಾರರು ನಂ.1, 2, 4, 5(ಎ), (ಬಿ) ಮತ್ತು (ಸಿ) ಪರ ಶ್ರೀ. ವಿ.ಆರ್.ಪಿ ವಕೀಲರಿಂದ :**

ನಾನು ಸಲ್ಲಿಸಿದ ಮುಖ್ಯ ವಿಚಾರಣಾ ಪ್ರಮಾಣ ಪತ್ರದ ಪುಟ 2 ಮತ್ತು 7 ರಲ್ಲಿ 9 ಆಸ್ತಿಗಳ ವಿವರ ಇದೆ ಎಂದರೆ ಸರಿ. ಪ್ರಮಾಣ ಪತ್ರದಲ್ಲಿ ನಾನು ಸ್ವಯಾರ್ಜಿತ ಆಸ್ತಿ ಮತ್ತು ಪಿತ್ರಾರ್ಜಿತ ಆಸ್ತಿ ಎಂದು ನಮೂದು ಮಾಡಿಲ್ಲ. ಸಾಕ್ಷಿ ಪುನಃ ಮುಂದುವರೆದು ನಾನು ನೋಡಿ ಹೇಳಬೇಕು ಎಂದು ನುಡಿಯುತ್ತಾರೆ. ನಾನು ಸಲ್ಲಿಸಿದ ಅರ್ಜಿಯಲ್ಲಾಗಲೀ ಅಥವಾ ನಾನು ಸಲ್ಲಿಸಿದ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಾಗಲೀ ಆಸ್ತಿ ಹೇಗೆ ಬಂತು ಎಂಬ ವಿಚಾರ ತಿಳಿಸಿಲ್ಲ

ಎಂದರೆ ಸರಿ. ಈ ಆಸ್ತಿಗಳ ಬಗ್ಗೆ ರೆವಿನ್ಯೂ ದಾಖಲೆಗಳನ್ನು ಮತ್ತು ಟೈಟಲ್ ಡೀಡ್ಸ್ ಗಳನ್ನು ಈ ನ್ಯಾಯಾಲಯದಲ್ಲಿ ನಾನು ಹಾಜರುಪಡಿಸಿರುತ್ತೇನೆ. ನಾನು ಈ ನ್ಯಾಯಾಲಯದಲ್ಲಿ ನೀಡಿದ ಈ ಸಾಕ್ಷ್ಯದಲ್ಲಿ 2 ಮರಣ ಪ್ರಮಾಣ ಪತ್ರಗಳನ್ನು ಮತ್ತು ನಾನು ಹೇಳುವಂತಹ 2 ಮರಣ ಶಾಸನಗಳನ್ನು ಬಿಟ್ಟು ಬೇರೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿ.

ದಿನಾಂಕ 08.07.2015 ರಂದು ಈ ದಾವೆಯನ್ನು ಹೂಡುವ ಸಂದರ್ಭದಲ್ಲಿ ತಪಸೀಲಿನ ಸ್ವತ್ತಿಗೆ ಸಂಬಂಧಿಸಿ ಯಾವ ಆಸ್ತಿ ಯಾರ ಹೆಸರಿನಲ್ಲಿ ಇತ್ತು ಎಂದು ನಾನು ನಮೂದು ಮಾಡಿಲ್ಲ ಮತ್ತು ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿಯು ಅಂತಹ ಸಂದರ್ಭ ಬಂದಿಲ್ಲ ಎಂದು ನುಡಿಯುತ್ತಾರೆ.

ಪ್ರಥಮಥಃ ಈ ಪ್ರಕರಣವನ್ನು ಸಲ್ಲಿಸುವ ಸಂದರ್ಭದಲ್ಲಿ ಎದುರುದಾರರು ಯಾರೂ ಇಲ್ಲ ಎಂದು ತೋರಿಸಿ ಹೂಡಿರುತ್ತೇನೆ ಎಂದರೆ ಸರಿ. ಪ್ರಥಮಥಃ ಈ ಪ್ರಕರಣವನ್ನು ಸಲ್ಲಿಸುವ ಸಂದರ್ಭದಲ್ಲಿ ನನ್ನ ಅಣ್ಣನಾದ ವಿಶ್ವನಾಥರವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ನನ್ನ ಪ್ರಕಾರ ಈ ಪ್ರಕರಣದಲ್ಲಿ ನನಗೆ ಮತ್ತು ನನ್ನ ಅಣ್ಣನಿಗೆ ನನ್ನ ತಂದೆಯವರು ಮರಣ ಶಾಸನ ಮಾಡಿದ್ದಾರೆ ಎಂಬುದನ್ನು ನಾನು ಸಾಧಿಸುತ್ತಿದ್ದೇನೆ ಎಂದರೆ ಸರಿ. ಹಾಗಿದ್ದರೂ ಸಹ ಪ್ರಥಮಥಃ ಈ ಪ್ರಕರಣವನ್ನು ಸಲ್ಲಿಸುವ ಸಂದರ್ಭದಲ್ಲಿ ನನ್ನ ಅಣ್ಣನಾದ ವಿಶ್ವನಾಥರವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ

ಸಾಕ್ಷಿಯು ಅವರು ಆ ಸಮಯ ಎಲ್ಲಿದ್ದರು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನಾನು ಈ ಸುಳ್ಳು ಪ್ರಕರಣವನ್ನು ದಾಖಲಿಸಿದ್ದು ಗೊತ್ತಾದ ನಂತರ ನನ್ನ ತಾಯಿ, ನನ್ನ ಅಣ್ಣ ಮತ್ತು ನನ್ನ ಸಹೋದರಿಯರು ಈ ಪ್ರಕರಣಕ್ಕೆ ತಾವಾಗಿಯೇ ಪಕ್ಷಗಾರರಾಗಿ ಬಂದಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಅವರುಗಳು ಪಕ್ಷಗಾರರಾಗಿ ಬಂದಿದ್ದಾರೆ ಎಂದು ನುಡಿಯುತ್ತಾರೆ. ನನ್ನ ತಾಯಿ, ನನ್ನ ಅಣ್ಣ ಮತ್ತು ನನ್ನ ಸಹೋದರಿಯರು ಈ ಪ್ರಕರಣದಲ್ಲಿ ಹಾಜರಾಗಿ ತಮ್ಮ ತಕರಾರನ್ನು ಸಲ್ಲಿಸಿದ್ದರು ಎಂದರೆ ಸರಿ. ಆ ತಕರಾರಿನಲ್ಲಿ ಮರಣ ಶಾಸನವನ್ನು ಸೃಷ್ಟಿಸಿ ಈ ಕೇಸನ್ನು ನಾನು ದಾಖಲು ಮಾಡಿದ್ದೇನೆ ಎಂದು ನಮೂದಿಸಿ ಹಾಕಿದ್ದೇನೆ ಎಂದು ನಮೂದಿಸಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಾನು ದಾಖಲೆಗಳನ್ನು ನೋಡಬೇಕಾಗುತ್ತದೆ ಎಂದು ನುಡಿಯುತ್ತಾರೆ. ಅವರು ಹಾಕಿದ ತಕರಾರಿಗೆ ನಾನು ಮರು ತಕರಾರನ್ನು ಸಲ್ಲಿಸಿದ್ದೇನೋ ಇಲ್ಲವೋ ಎಂಬ ಬಗ್ಗೆ ನಾನು ದಾಖಲೆಗಳನ್ನು ನೋಡಿ ಹೇಳಬೇಕಾಗುತ್ತದೆ ಎಂದು ನುಡಿಯುತ್ತಾರೆ. ಎದುರುದಾರರು ತಕರಾರಿನ ಜೊತೆಗೆ ದಾಖಲೆಗಳನ್ನು ಸಲ್ಲಿಸಿದ್ದು ಅದನ್ನು ಪರಿಶೀಲಿಸಲಾಗಿದೆಯೇ ಎಂದು ಕೇಳಲಾಗಿ ಸಾಕ್ಷಿಯು ಅದನ್ನು ತನಗೆ ನೀಡಿಲ್ಲ ಹಾಗಾಗಿ ಪರಿಶೀಲಿಸಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಎದುರುದಾರರು ಸಲ್ಲಿಸಿದ 37
ದಾಖಲೆಗಳನ್ನು ತೋರಿಸಿ ಇವುಗಳನ್ನು ನೋಡಿದ್ದೀರಿಯೇ ಎಂದು ಕೇಳಲಾಗಿ ಸಾಕ್ಷಿ ನೋಡಿದ್ದೇನೆ ಎಂದು ನುಡಿಯುತ್ತಾರೆ.

ದಿನಾಂಕ 22.05.2015 ರಿಂದಲೇ ವಾದ ಪತ್ರದ ಸ್ವತ್ತಿಗೆ ಸಂಬಂಧಿಸಿ ಬಿಬಿಎಂಪಿಯ ಎಲ್ಲಾ ದಾಖಲೆಗಳಲ್ಲಿ ನನ್ನ ಮತ್ತು ನನ್ನ ತಾಯಿ, ಅಣ್ಣ ಮತ್ತು ಸಹೋದರಿಯರ ಹೆಸರು ಜಂಟಿಯಾಗಿ ತೋರಿಸಿದ್ದು ಕಂಡುಬರುತ್ತಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅದು ಸುಳ್ಳು ದಾಖಲೆ ಎಂದು ನುಡಿಯುತ್ತಾರೆ. ಈ ದಾಖಲೆಗಳು ಸುಳ್ಳು ಎಂದು ಹೇಳಿ ಈ ಕಳೆದ 9 ವರ್ಷಗಳಿಂದ ಪೊಲೀಸು ದೂರನ್ನಾಗಲೀ ಅಥವಾ ಇತರ ಪ್ರಾಧಿಕಾರಗಳ ಮುಂದೆ ದೂರುಗಳನ್ನು ಸಲ್ಲಿಸಿದ್ದೇನೆ. ಆ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ನಾನು ಎಲ್ಲಾ ಖಾತೆಗಳ ಬಗ್ಗೆ ಜಂಟಿ ಆಯುಕ್ತರ ಮುಂದೆ ಹಾಕಿದ ರಿವಿಷನ್ ಅರ್ಜಿಯು ವಜಾಗೊಂಡಿರುತ್ತದೆ ಎಂದರೆ ಸರಿ. ನಾನು ಅದನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿರುತ್ತೇನೆ. ಈ ಮೇಲ್ಮನವಿಯ ಬಗ್ಗೆ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ. ಈ ಮೇಲ್ಮನವಿಯನ್ನು ಯಾರ ಮುಂದೆ ಯಾವಾಗ ಹಾಕಿದ್ದೇನೆ ಪ್ರಸ್ತುತ ಯಾವ ಪ್ರಕ್ರಿಯೆಯಲ್ಲಿ ಇದೆ ಎಂಬ ಬಗ್ಗೆ ನನಗೆ ನೆನಪಿಲ್ಲ. ಈಗಲೂ ಖಾತೆಗಳಲ್ಲಿ ಮತ್ತು ದಾಖಲೆಗಳಲ್ಲಿ ನಮ್ಮೆಲ್ಲರ ಹೆಸರುಗಳು ನಮೂದಾಗಿ ಜಂಟಿಯಾಗಿ ಮುಂದುವರೆದಿದೆ ಎಂದರೆ ಸಾಕ್ಷಿಯು ಅದು ಸುಳ್ಳು ದಾಖಲೆಯಾಗಿದ್ದು ಅದು ಹಾಗೆಯೇ ಮುಂದುವರಿದುಕೊಂಡು ಬಂದಿದೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರಿದು ನಾನು ಯಾವುದೇ ಖಾತೆ ಮಾಡಲು ಸಹಿಯನ್ನು ಹಾಕಿಲ್ಲ ಎಂದು ನುಡಿಯುತ್ತಾರೆ.

ನಾನು ಮರಣ ಶಾಸನದಂತೆ ಖಾತೆ ಮಾಡಿಕೊಡಬೇಕೆಂದು ಬಿಬಿಎಂಪಿಯವರಿಗೆ ಅರ್ಜಿ ಸಲ್ಲಿಸಿದ್ದೇನೋ ಇಲ್ಲವೋ ಎಂದು ನನಗೆ ನೆನಪಿಲ್ಲ. ಜಂಟಿ ಖಾತೆಯು ವಾದ ಪತ್ರದ ಸ್ವತ್ತಿಗೆ ಸಂಬಂಧಿಸಿ ನಮ್ಮಗಳ ಹೆಸರಿಗೆ ವರ್ಗಾಯಿಸಿದ ನಂತರ ನಾನು ಹೇಳುವಂತಹ 2 ಮರಣ ಶಾಸನಗಳನ್ನು ನಾನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಮೇಲಿನ ಖಾತೆಗಳು ದಿನಾಂಕ 22.05.2015 ರಂದು ಆಗಿದ್ದು ನಾನು ಈ ಪ್ರಕರಣವನ್ನು ದಿನಾಂಕ 08.07.2015 ರಂದು ಸಲ್ಲಿಸಿದ್ದೇನೆ ಎಂದರೆ ಸರಿ.

ನನ್ನ ತಂದೆಯವರು 2004 ನೇ ಇಸವಿಯಲ್ಲಿ ಮೃತ ಪಟ್ಟಿರುತ್ತಾರೆ. 2015 ರಲ್ಲಿ ನಮ್ಮೆಲ್ಲರ ಹೆಸರಿಗೆ ಜಂಟಿ ಖಾತೆ ಆಗುವವರೆಗೂ ವಾದ ಪತ್ರದ ಸ್ವತ್ತು ತಂದೆ ಹೆಸರಿನಲ್ಲಿ ಖಾತೆಯಲ್ಲಿ ಮುಂದುವರೆದಿತ್ತು ಎಂದರೆ ಸರಿಯಲ್ಲ. ನನ್ನ ತಂದೆಯವರು ಮೃತ ಪಟ್ಟ ನಂತರ ಮತ್ತು 22.05.2015 ರ ಮೊದಲು ನನ್ನ ತಂದೆಯವರಾದ ಮಾಸ್ತಿ ಗೌಡರ ಹೆಸರಲ್ಲಿ ಇತ್ತು.

ನನ್ನ ತಂದೆಯವರು ದಿನಾಂಕ 29.05.2004 ರಲ್ಲಿ ಮೃತ ಪಟ್ಟಿರುತ್ತಾರೆ. ನನ್ನ ತಂದೆಯವರು ಅವರ ಮರಣದವರೆಗು ನನ್ನ ತಾಯಿ ಜೊತೆ ಇದ್ದರು. ಸಾಕ್ಷಿ ಮುಂದುವರಿದು ನಾವೆಲ್ಲಾ ಒಟ್ಟು ಕುಟುಂಬದಲ್ಲಿ ಇದ್ದೆವು ಎಂದು ನುಡಿಯುತ್ತಾರೆ. ನನ್ನ ತಂದೆ ತಾಯಿ ಇಬ್ಬರು ಅನ್ಯೋನ್ಯವಾಗಿದ್ದರು. ನನ್ನ ತಂದೆ ಜೊತೆ ಅವರ ಮಕ್ಕಳಾದ ನಾವೆಲ್ಲಾ ಅನ್ಯೋನ್ಯವಾಗಿದ್ದೆವು. ನನ್ನ ತಂದೆಯವರು ಎಲ್ಲರ ಜೊತೆ ಅನ್ಯೋನ್ಯವಾಗಿದ್ದರೂ ಸಹ ನನ್ನ ತಾಯಿ ಮತ್ತು ಸಹೋದರಿಯರನ್ನು

ಬಿಟ್ಟು ನನ್ನ ಮತ್ತು ನನ್ನ ಅಣ್ಣನ ಪರವಾಗಿ ನಾನು ಹೇಳುವಂತೆ ಮರಣ ಶಾಸನವನ್ನು ಮಾಡಲು ಯಾವುದಾದರೂ ವಿಶೇಷ ಕಾರಣವಿತ್ತೇ ಎಂಬ ಪ್ರಶ್ನೆಗೆ ಸಾಕ್ಷಿಯು ನನ್ನ ತಂದೆಯವರು ಅವರಲ್ಲಿದ್ದ ಆಸ್ತಿಯನ್ನು ಎಲ್ಲರಿಗೂ ವಿಭಾಗ ಮಾಡಿ ನೀಡಿದ್ದು ಅವರ ಹೆಸರಿಗೆ ಉಳಿಕೆ ಮಾಡಿದ್ದ ಆಸ್ತಿಯನ್ನು ಮಾತ್ರ ನಮಗೆ ಉಯಿಲು ನಾಮೆ ಮಾಡಿ ನೀಡಿದ್ದಾರೆ ಎಂದು ನುಡಿಯುತ್ತಾರೆ. ಆ ರೀತಿ ನನ್ನ ತಂದೆಯವರು ನಮ್ಮೆಲ್ಲರಿಗೂ ವಿಭಾಗ ಮಾಡಿದ ಬಗ್ಗೆ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೋ ಇಲ್ಲವೋ ನನಗೆ ನೆನಪಿಲ್ಲ. ಆ ಬಗ್ಗೆ ದಾಖಲೆ ಇದೆ. ವಿಭಾಗ ಪತ್ರದ ಬಗ್ಗೆ ನಾನು ಹಾಜರು ಪಡಿಸಿದ ಮರಣ ಶಾಸನದಲ್ಲಿ, ಈ ಅರ್ಜಿಯಲ್ಲಿ ಹಾಗು ನಾನು ಸಲ್ಲಿಸಿದ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಮೂದಿಸಿರುತ್ತೇನೆ. ವಿಭಾಗ ಪತ್ರದ ಬಗ್ಗೆ ಯಾವುದು ನಮೂದು ಇಲ್ಲದಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತಾನು ವಿಭಾಗ ಮಾಡಿದ ಬಗ್ಗೆ ಮತ್ತು ನನ್ನ ಮತ್ತು ನನ್ನ ಅಣ್ಣನ ಹೆಸರಿಗೆ ಮರಣ ಶಾಸನ ಮಾಡುವ ಬಗ್ಗೆ ನನಗೆ ಖುದ್ದಾಗಿ ಹೇಳಿರುವುದಿಲ್ಲ ಆದರೆ ಕುಟುಂಬದವರು ಎಲ್ಲರೂ ಇದ್ದಾಗ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಹಾಗೆ ಹೇಳುವಾಗ ನಾನು, ನನ್ನ ಅಣ್ಣ, ಅತ್ತಿಗೆ, ತಾಯಿ ಮತ್ತು ನನ್ನ ಹೆಂಡತಿ ಲೀಲಾ ಇದ್ದೆವು. ನನ್ನ ತಂದೆಯವರು ಬದುಕಿರುವಾಗಲೇ ಮರಣ ಶಾಸನ ಮಾಡಿದ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅವರು

ಮರಣ ಶಾಸನ ಮಾಡುತ್ತಾರೆ ಎಂಬ ವಿಚಾರ ಗೊತ್ತಿತ್ತು ಎಂದು ನುಡಿಯುತ್ತಾರೆ. ನನ್ನ ತಂದೆಯವರ ಮರಣ ಪಟ್ಟ ನಂತರ 2004 ರಿಂದ 2015 ರವರೆಗೂ ಮರಣ ಶಾಸನದ ಬಗ್ಗೆ ನನಗೆ ಗೊತ್ತಿರಲಿಲ್ಲ. ಈ 11 ವರ್ಷಗಳಲ್ಲಿ ಮರಣ ಶಾಸನದ ಬಗ್ಗೆ ಮಾತುಕತೆ ಮಾಡುವ ಸಂದರ್ಭ ಬಂದಿರಲಿಲ್ಲ.

ನನ್ನ ತಂದೆಯವರು ಮರಣ ಹೊಂದಿದಾಗ ಅವರಿಗೆ 60 ಕ್ಕಿಂತ ಹೆಚ್ಚಿನ ವಯಸ್ಸಾಗಿತ್ತು. ನನ್ನ ತಂದೆಯವರು ಎಷ್ಟು ವಿದ್ಯಾಭ್ಯಾಸ ಮಾಡಿದ್ದಾರೆ ಎಂದು ಗೊತ್ತಿಲ್ಲ ಆದರೆ ಅವರಿಗೆ ಕನ್ನಡ ಓದಲು ಬರೆಯಲು ಬರುತ್ತಿತ್ತು ಮತ್ತು ಆಂಗ್ಲ ಭಾಷೆಯಲ್ಲಿ ಸಹಿ ಮಾಡುತ್ತಿದ್ದರು. ಅವರು ತಮ್ಮ ಜೀವಿತಾವಧಿಯಲ್ಲಿ ಆರೋಗ್ಯವಾಗಿದ್ದರು ಎಂದರೆ ಸರಿ. ನನ್ನ ಪ್ರಕಾರ ಮರಣ ಶಾಸನವನ್ನು ಮಾಡಿದ 3 ತಿಂಗಳು 24 ದಿನಕ್ಕೆ ನನ್ನ ತಂದೆಯವರು ಮೃತ ಪಟ್ಟಿದ್ದಾರೆ ಎಂದರೆ ನನಗೆ ಸರಿಯಾಗಿ ನೆನಪಿಲ್ಲ. ನನ್ನ ತಂದೆಯವರು ದಿನಾಂಕ 29.05.2004 ರಂದು ಮೃತ ಪಟ್ಟಿರುತ್ತಾರೆ ಎಂದರೆ ಸರಿ.

ನನ್ನ ತಂದೆಯವರು ಕೃಷಿಕರು ಎಂದರೆ ಸರಿ. ಸಾಕ್ಷಿ ಮುಂದುವರಿದು ಅವರು ಭೂಮಿ ವ್ಯಾಪಾರ ಕೂಡ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ತಂದೆಯವರು ಮೃತ ಪಡುವವರೆಗೂ ಸ್ವಂತ ಮನೆ ಇರಲಿಲ್ಲ ಎಂದರೆ ಸರಿಯಲ್ಲ. ಸ್ವಂತ ಮನೆಯ ನಂ.9/1, 4 ನೇ ಮುಖ್ಯ ರಸ್ತೆ, 6 ನೇ ಅಡ್ಡರಸ್ತೆ, ಕೈಗಾರಿಕಾ ನಗರ, ರಾಜಾಜಿನಗರ, ಬೆಂಗಳೂರು-44 ರಲ್ಲಿ ಸ್ವಂತ ಮನೆ ಇತ್ತು. ರಾಜಾಜಿನಗರದಲ್ಲಿ

ಇಂಡಸ್ಟ್ರಿಯಲ್ ಷೆಡ್ಡುಗಳು ಮಾತ್ರ ಇದ್ದವು ಎಂದರೆ ಸಾಕ್ಷಿಯು ಮನೆ ಮತ್ತು ಷೆಡ್ಡು ಎರಡೂ ಇದ್ದವು ಎಂದು ನುಡಿಯುತ್ತಾರೆ. ಆ ರೀತಿ ಮನೆ ಇದ್ದ ಬಗ್ಗೆ ದಾಖಲೆಗಳನ್ನು ನಾನು ಹಾಜರುಪಡಿಸಿಲ್ಲ.

ನನ್ನ ತಂದೆಯವರು ಆಸ್ಪತ್ರೆಯಲ್ಲಿ ಮೃತ ಪಟ್ಟಿರುತ್ತಾರೆ. ಆ ಸಮಯದಲ್ಲಿ ಅವರು ಬಸವೇಶ್ವರನಗರದಲ್ಲಿ ಭೋಗ್ಯವೋ ಅಥವಾ ಬಾಡಿಗೆ ಮಾನೆಯಲ್ಲಿ ವಾಸ ಮಾಡುತ್ತಿದ್ದರು. ನನಗೆ ಈಗ ಅಷ್ಟು ನೆನಪಾಗುತ್ತಿಲ್ಲ. ಆದರೆ ಅದು ಸ್ವಂತ ಮನೆ ಅಲ್ಲ.

ನಾನು ಹೇಳುವಂತಹ ನಿ.ಪಿ.1 ಮತ್ತು 2 ಮರಣ ಶಾಸನದಲ್ಲಿ ನನ್ನ ತಂದೆಯವರಿಗೆ ಆಸ್ತಿ ಹೇಗೆ ಬಂತು ಎಂದು ನಮೂದು ಇಲ್ಲ ಎಂದರೆ ಸಾಕ್ಷಿಯು ಆ ಎರಡೂ ದಾಖಲೆಗಳನ್ನು ಪರಾಂಬರಿಸಿ ಅದರಲ್ಲಿ ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ಖಾತೆಯ ವಿಚಾರವನ್ನು ಸಹ ನಿ.ಪಿ.1 ಮತ್ತು 2 ರಲ್ಲಿ ಬರೆದಿರುತ್ತಾರೆ. ನಿ.ಪಿ.1 ಮತ್ತು 2 ನಾನು ಸೃಷ್ಟಿಸಿದ ದಾಖಲೆಯಾದ್ದರಿಂದ ಮೇಲಿನ ಯಾವ ವಿಚಾರಗಳು ನಮೂದು ಆಗಿಲ್ಲ ಎಂದರೆ ಸರಿಯಲ್ಲ.

ನನ್ನ ತಾಯಿಯವರು ಈಗಲೂ ಆರೋಗ್ಯವಾಗಿ ಇದ್ದಾರೋ ಇಲ್ಲವೋ ಎಂಬ ಬಗ್ಗೆ ಮಾಹಿತಿ ಇಲ್ಲ. ನನ್ನ ತಾಯಿಯವರು ನನ್ನನ್ನು ನ್ಯಾಯಾಲಯಕ್ಕೆ ಮರಣ ಶಾಸನವನ್ನು ಹಾಕಿದ ನಂತರ ಓಡಿಸಿರುತ್ತಾರೆ. ನಾನು ಓಡಿ ಹೋಗಿ ನನ್ನ ಹೆಂಡತಿ ಮನೆಯಲ್ಲಿ ವಾಸವಾಗಿದ್ದೇನೆ. ಆ ಸಮಯದಲ್ಲಿ ನನ್ನ ಮೊದಲ ಹೆಂಡತಿ ಮನೆಯಲ್ಲಿ ವಾಸಿಸುತ್ತಿದ್ದೆ. ಈಗಲೂ ನಾನು ಅಲ್ಲಿಯೇ ವಾಸವಾಗಿದ್ದೇನೆ.

ಗುಣಶೀಲ ನನ್ನ ಅಕ್ಕ ತ್ರಿವೇಣಿಯ ಮಗಳು ಎಂದರೆ ಸರಿ. ಅವಳಿಗೂ ನನಗೂ ಮದುವೆಯಾಗಿ ಸಿಂಚನಾ ಎಂಬ ಹೆಣ್ಣು ಮಗು ಇದೆ ಎಂದರೆ ಸರಿಯಲ್ಲ. ನಾನು ಮುನಿಸಿಪಾಲಿಟಿ ಚುನಾವಣೆಯಲ್ಲಿ ನಿಂತಿರುತ್ತೇನೆ. ಚುನಾವಣೆಗೆ ಸಂಬಂಧಿಸಿ ನಾನು ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ಶ್ರೀಮತಿ ಗುಣಶೀಲಾರವರ ಹೆಸರನ್ನು ನಮೂದಿಸಿರುತ್ತೇನೆ. ಅದರಲ್ಲಿ ಲೀಲಾರವರ ಹೆಸರನ್ನು ನಮೂದಿಸಿಲ್ಲ ಎಂದರೆ ಆ ಬಗ್ಗೆ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಲೀಲಾರವರ ಮೊದಲ ಗಂಡ ಯಾರೆಂದು ನನಗೆ ಗೊತ್ತಿಲ್ಲ.

(ಮುಂದುವರಿದ ಪಾಟಿ ಸವಾಲಿಗೆ ಅವಕಾಶ ಕೇಳಿದ್ದರಿಂದ, ಅವಕಾಶ ನೀಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಮಮ್ತಾಜ್)**
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು.**